**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ **33/2018**

ಸಿ.ಡಬ್ಲ್ಯೂ –15 ಪಿ.ಡಬ್ಲ್ಯೂ -14

| | | |
|---|---|---|
| ಹೆಸರು | ಃ | ಕರಬಸಪ್ಪ |
| ತಂದೆಃಗಂಡ | ಃ | ಶಾಂತಪ್ಪ ಕ್ಯಾರ |
| ವಯಸ್ಸು | ಃ | 40 ವರ್ಷ |
| ಉದ್ಯೋಗ | : | ವಕೀಲರು |
| ವಾಸಸ್ಥಳ | ಃ | ಕಡಗಂಚಿ |

ದಿನಾಂಕಃ 03.10.2023

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿ ಪರಿಚಯ ಇರುವುದಿಲ್ಲ. ಚಾಸಾ-೧ ರಿಂದ ೧೪ ರವರ ಪರಿಚಯ ಇರುತ್ತದೆ. ಮೃತ ಶ್ರೀಶೈಲ್ ಹಾಗೂ ಶಿವಾನಂದರವರ ಪರಿಚಯ ಇರುತ್ತದೆ. ದಿ: 03.05.2017 ರಂದು ಬೆಳ್ಳಿಗೆ ಸಮಯದಲ್ಲಿ ಶ್ರೀಶೈಲ್ ಕೊರಳ್ಳಿ ಹಾಗೂ ಶಿವಾನಂದ ಕೊರಳ್ಳಿರವರಿಗೆ ರಸ್ತೆ ಅಪಘಾತ ಆಗಿರುತ್ತದೆ. ಶ್ರೀಶೈಲ್ ಕೋರಳಈಳಿರವರು ಸ್ಥಳದಲ್ಲಿ ಮೈಪಟ್ಟಿರುತ್ತಾರೆ. ಶಿವಾನಂದ ಕೊರಳ್ಳಿರವರಿಗೆ ಉಪಚಾರಕ್ಕಾಗಿ ಸರಕಾರ ಆಸ್ಪತ್ರೆ ಕಲಬುರಗಿಗೆ ಕರದುಕೊಂಡು ಹೋದರು. ಈ ವಿಷಯ ತಿಳಿದು ಸರಕಾರಿ ಆಸ್ಪತ್ರೆಗೆ ಹೋದೆನು. ಚಾಸಾ-೧ ರವರು ದೂರು ಬರೆಯಲು ನನಗೆ ಕೊರಿಕೊಂಡರು. ಚಾಸಾ-೧ ರವರು ಹೇಳಿದ ಹಾಗೆ ನಾನು ಬರದು ಓದಿ ಅವರಿಗೆ ತಿಳಿಸಿ ದಸ್ತಿಗಿರ ಎಂದು ನನ್ನ ಸಹಿ ಮಾಡಿರುತ್ತೆನೆ ಈ ವಿಷಯವಾಗಿ ದಿ: 14.05.2017 ರಂದು ಪೋಲಿಸರಿಗೆ ಹೇಳಿಕೆ ನೀಡುರುತ್ತೇನೆ. ಸಾಕ್ಷಿಗೆ ಈಗ ನಿಪಿ-೧ ನ್ನು ತೋರಿಸಿ ಅದರಲ್ಲಿ ಇರುವ ಸಹಿಯನ್ನು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-೧ (ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ಶ್ರೀ ಎಸ್.ಎಸ್.ಸಿ ವಕೀಲರಿಂದ**

ಸುಮಾರು ೧೫ ವರ್ಷಗಳಿಂದ ಕಲಬುರಗಿಯಲ್ಲಿ ನಾನು ವಕಾಲತ್ತು ಮಾಡಿತ್ತಿದ್ದೇನು. ನಾನು ಹೆಚ್ಚು ಕ್ರಿಮಿನಲ್ ಪ್ರಕರಣವನ್ನು ನಡೆಸುತ್ತೇನೆ. ಎಂ.ವಿ.ಸಿ ಪ್ರಕರಣಗಳನ್ನು ನಡೆಸುತ್ತೇನೆ ಎಂದರೆ ಸರಿ. ಚಾಸಾ-೧ ಹಾಗೂ ಮೃತರು ನನ್ನ ಸಬ್ಬಂದಿಕರು ಎಂದರೆ ಸರಿ. ಮೃತರ ಎಂ.ವಿ.ಸಿ ಪ್ರಕರಣಗಳು ನನ್ನ ಮುಖಾಂತರ ಆಗಿರುತ್ತವೆ ಎಂದರೆ ಸರಿ ಅಲ್ಲ. ದಿ: 14.05.2017 ರಂದು ನನ್ನೊಂದಿಗೆ ಮತ್ತೇ ಯಾರ ಹೆಳಿಕೆಗಳನ್ನು ಪಡೆದರು ಎಂದು ನನಗೆ ಮಾಹಿತಿ ಇಲ್ಲ. ಚಾಸಾ-೧ ರವರ ಮಾತು ಕೇಳಿ ಮೃತರ ಪರಿಹಾರ ಧನ ಕೊಡಿಸಬೇಕು ಎಂಬ ಉದ್ದೇಶದಿಂದ ಸುಳ್ಳು ದೂರನ್ನು ತಯಾರಿಸಿ ಸಹಿ ಮಾಡಿರುತ್ತೆನೆ ಎಂಧರೆ ಸರಿ ಸಾಕ್ಷಿ ಮುಂದುವರೆದು ಚಾಸಾ-೧ ರವರ ತಮ್ಮ ತೀರಿಕೊಂಡ ಕಾರಣ ಅವರ ಕೈ ಕಾಲು ನಡುಗುತ್ತೀತ್ತು. ಆದಕಾರಣ ನಾನು ದೂರನ್ನು ಅವರ ಹೇಳಿದಂತೆ ಬರೆದುಕೊಟ್ಟಿರುತ್ತೇನೆ. ನಾನು ನನ್ನ ಹೇಳಿಕೆಯಲ್ಲಿ ಈ ವಿಷಯವನ್ನು ಹೇಳಿರುವುದಿಲ್ಲ. ನಾನು ಚಾಸಾ-೧ ರವರಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿ ಅಲ್ಲ. ಚಾಸಾ-೧ ರವರಗ ಪರಿಹಾರ ಧನ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ